ತಗುಲಿದ್ದರೆ ಹುಟ್ಟುವ ಮಕ್ಕಳಿಗೆ ಕ್ಯಾಟರಾಕ್ಟ್ ಬರುವ ಸಾಧ್ಯತೆ ಹೆಚ್ಚು' ಎನ್ನುತ್ತಾರೆ.

'ಇದು ಬಹಳ ಅಪರೂಪದ ಸಮಸ್ಯೆ. ಇದು ಚಿಕ್ಕಮಕ್ಕಳಲ್ಲಿ ಶೇ. 2ರಷ್ಟು ಮಕ್ಕಳಿಗಷ್ಟೇ ಬರುವ ತೊಂದರೆ. ಶಸ್ತ್ರಚಿಕಿತ್ಸೆ ಬಳಿಕ ಬರೀ ಡ್ರಾಪ್ಸ್ ಹಾಕಿಕೊಂಡಿದ್ದರೆ ಸಾಕು. ಮೊದಮೊದಲು ವಾರಕ್ಕೊಮ್ಮೆ ತಪಾಸಣೆ ಮಾಡಿಸಿಕೊಳ್ಳಬೇಕು. ಕನ್ನಡಕವನ್ನೂ ಹಾಕಿಕೊಳ್ಳಬೇಕಾಗುತ್ತದೆ. ಕಣ್ಣು ಸಹಜ ಸ್ಥಿತಿಗೆ ಬಂದ ಬಳಿಕ ಕನ್ನಡಕ ಹಾಕಿಕೊಳ್ಳುವ ಅಗತ್ಯವಿರುವುದಿಲ್ಲ' ಎಂದು ಮಾಹಿತಿ ನೀಡುತ್ತಾರೆ ಈ ವೈದ್ಯರು.

## ವಯಸ್ಕರಲ್ಲಿ ಕ್ಯಾಟರಾಕ್ಟ್

ಸಾಮಾನ್ಯವಾಗಿ ವಯಸ್ಕರಲ್ಲಿ ಅದೂ ಐವತ್ತು ವರ್ಷ ದಾಟಿದವರಲ್ಲಿ ಕ್ಯಾಟರಾಕ್ಟ್ ಸಮಸ್ಯೆ ಕಂಡುಬರುತ್ತದೆ. ಮಧುಮೇಹ ಅನಿಯಂತ್ರಿತವಾಗಿದ್ದರೆ ಕಣ್ಣು ದೃಷ್ಟಿದೋಷ ಬರುತ್ತದೆ. ಇದೇ ಕಣ್ಣಿನ ಪೊರೆ ಸಮಸ್ಯೆ. ಇವರಿಗೂ ಶಸ್ತ್ರಚಿಕಿತ್ಸೆಯೊಂದೇ ಪರಿಹಾರ.

## ಯಾರಿಗೆಲ್ಲ ಶಸ್ತ್ರಚಿಕಿತ್ಸೆ ಅಗತ್ಯವಿದೆ?

- ಅನಿಯಂತ್ರಿತ ಮಧುಮೇಹ ಇದ್ದವರಿಗೆ
- ಎಕ್ಸರೆ ಅಥವಾ ಗಾಮಾ ಕಿರಣಗಳಿಗೆ ಮುಖ ಒಡ್ಡಿ ಕೆಲಸ ಮಾಡುವವರಿಗೆ
- ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಕಣ್ಣಿಗೆ ಹಾನಿಯಾದವರಿಗೆ
- ಗಾಜಿನ ಕಾರ್ಖಾನೆ, ಕಬ್ಬಿಣದ ಕುಲುಮೆಯಲ್ಲಿ ಕೆಲಸ ಮಾಡುವವರಿಗೆ
- ಕಣ್ಣಿಗೆ ಬಲವಾದ ಏಟು ಬಿದ್ದವರಿಗೆ ಕಣ್ಣಿನಲ್ಲಿ ಪೊರೆ ಬರುವ ಸಾಧ್ಯತೆ ಇದೆ.

ಕಣ್ಣಿನ ಪೊರೆ ಅಥವಾ ಕ್ಯಾಟರಾಕ್ಟ್ ಎಂಬುದು ವಯಸ್ಸಾದವರಲ್ಲಿ ಕಂಡುಬರುವ ಸಾಮಾನ್ಯ ಸಮಸ್ಯೆ. ಸೂಕ್ತ ಸಮಯದಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿ ಪೊರೆ ತೆಗೆದು ಹಾಕದಿದ್ದರೆ ಇದು ಅಂಧತ್ವಕ್ಕೆ ಕಾರಣವಾಗುವ ಅಪಾಯವೂ ಇದೆ. ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಪ್ರಕಾರ ಕಣ್ಣಿನ ಪೊರೆ ಈಗಾಗಲೇ ವಿಶ್ವದ ಬಹುಪಾಲು ಕುರುಡುತನಕ್ಕೆ ಕಾರಣವಾಗಿದೆ ಭಾರತದಲ್ಲಿ ಶೇ. 51 ಕ್ಕಿಂತ ಹೆಚ್ಚು ಅಂಧತ್ವಕ್ಕೆ ಕಾರಣ ಕಣ್ಣಿನ ಪೊರೆ ಸಮಸ್ಯೆಯೇ ಕಾರಣ. ಅಲ್ಲದೆ ಭಾರತದಲ್ಲಿ ಪ್ರತಿವರ್ಷ 20 ಲಕ್ಷ ಹೊಸ ಕಣ್ಣಿನ ಪೊರೆ ಪ್ರಕರಣಗಳು ದಾಖಲಾಗುತ್ತಿವೆ.



ಅಗರ್‌ವಾಲ್ಸ್ ಕಣ್ಣಿನ ಆಸ್ಪತ್ರೆಯಲ್ಲಿ ಕ್ಯಾಟರಾಕ್ಟ್ ಸರ್ಜರಿಗೆ ಒಳಗಾದ ಪವನ್‌ಕುಮಾರ್ ಜೊತೆಗೆ ವೈದ್ಯರು.

ಸಮಸ್ಯೆ ಕಂಡ ತಕ್ಷಣ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಿ. ವಿಳಂಬವಾದರೆ ಹಲವು ಸಮಸ್ಯೆ ಎದುರಿಸಬೇಕಾಗಬಹುದು.

ಪೊರೆ ತೆಗೆದು ಹಾಕಲು ವಿಳಂಬವಾದರೆ ದೃಷ್ಟಿಯನ್ನು ಪುನಃ ಪಡೆಯುವ ಸಾಧ್ಯತೆ ಕಡಿಮೆ.

ಕಣ್ಣಿನ ಪೊರೆ ಬಲಿತರೆ ಅದು ಲೆನ್ಸ್ ಪ್ರೇರಿತ ಗ್ಲಾಕೋಮಾ ಅಥವಾ ಕಣ್ಣುಗಳೊಳಗಿನ ಮಸೂರ ಸ್ಥಳಾಂತರಗೊಳ್ಳಲು ಕಾರಣವಾಗಬಹುದು.

ಇದರಿಂದ ದೃಷ್ಟಿ ಕಳೆದುಕೊಳ್ಳುವ ಸಾಧ್ಯತೆ ಹೆಚ್ಚು.

ಕಣ್ಣಿನ ಶಸ್ತ್ರಚಿಕಿತ್ಸೆಯೂ ಕಷ್ಟಕರವಾಗಬಹುದು.

## ಶಸ್ತ್ರಚಿಕಿತ್ಸೆಯ ಬಳಿಕ?

- ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆಯ ಬಳಿಕ ಹೆಚ್ಚಿನ ಕಾಳಜಿ ವಹಿಸಬೇಕಾದದ್ದು ಅನಿವಾರ್ಯ.
- ಶಸ್ತ್ರಚಿಕಿತ್ಸೆಯ ನಂತರ ಮೊಬೈಲ್, ಲ್ಯಾಪ್‌ಟಾಪ್, ಕಂಪ್ಯೂಟರ್, ಟೀವಿ ವೀಕ್ಷಣೆ ಸ್ವಲ್ಪ ಕಾಲ ನಿಲ್ಲಿಸಿ.
- ಬಿರುಬಿಸಿಲಿನಲ್ಲಿ ಹೊರಗೆ ಹೋಗಲೇಬೇಡಿ.
- ವಾಹನ ಚಲಾಯಿಸುವುದನ್ನು ಕೆಲಕಾಲ ಸಂಪೂರ್ಣ ನಿಲ್ಲಿಸಿ.
- ಹೆಚ್ಚು ಶ್ರಮದ ಕೆಲಸಗಳನ್ನು ಮಾಡಬೇಡಿ. ತೂಕ ಇರುವ ವಸ್ತುಗಳನ್ನು ಎತ್ತುವುದು ಬೇಡ.
- ಕಣ್ಣುಗಳ ಮೇಲೆ ಹೆಚ್ಚಿನ ಒತ್ತಡ ಬೀಳುವುದನ್ನು ತಪ್ಪಿಸಿ.
- ಕಣ್ಣಿಗೆ ಯಾವುದೇ ರೀತಿಯ ಸೋಂಕು ತಗುಲದಂತೆ ಎಚ್ಚರ ವಹಿಸಿ.
- ಶಸ್ತ್ರಚಿಕಿತ್ಸೆಯ ನಂತರ ಯಾವುದೇ ಕಾರಣಕ್ಕೂ ಕಣ್ಣುಗಳನ್ನು ಉಜ್ಜಬೇಡಿ.

## ಡಯಾಬಿಟಿಸ್ ರೆಟಿನೊಪತಿ

ಅನಿಯಂತ್ರಿತ ಮಧುಮೇಹ ಇರುವವರಲ್ಲಿ ಕಂಡುಬರುವ ಸಾಮಾನ್ಯ ಸಮಸ್ಯೆ ಡಯಾಬಿಟಿಕ್ ರೆಟಿನೊಪತಿ. ಕಣ್ಣಿನಲ್ಲಿರುವ ಮಸೂರ ಮಂಜಾಗುವುದೇ ಕಣ್ಣಿನ ಪೊರೆಯ ಲಕ್ಷಣ. ಮಧುಮೇಹ ಇರುವ ವಯಸ್ಕರಲ್ಲಿ ನಲ್ವತ್ತೈದು ವರ್ಷ ಮೇಲ್ಪಟ್ಟವರಲ್ಲಿ ಕಣ್ಣಿನ ಪೊರೆಯ ಅಪಾಯವು ನಾಲ್ಕು ಪಟ್ಟು ಹೆಚ್ಚಿರುತ್ತದೆ.

ರಕ್ತದಲ್ಲಿ ಸಕ್ಕರೆಯ ಪ್ರಮಾಣ ಅತ್ಯಂತ ಹೆಚ್ಚಿದ್ದು, ಮಧುಮೇಹ ನಿಯಂತ್ರಣಕ್ಕೆ ಬರದೇ ಇರುವವರಲ್ಲಿ ಡಯಾಬಿಟಿಕ್ ರೆಟಿನೊಪತಿ ಬರುವ ಅಪಾಯ ಹೆಚ್ಚು. ಖಾಲಿ ಹೊಟ್ಟೆಯಲ್ಲಿ ಸಕ್ಕರೆ ಪ್ರಮಾಣ ಅಧಿಕ ಇರುವವರಲ್ಲಿ ಕಣ್ಣಿನ ಪೊರೆ ಬರುವ ಸಾಧ್ಯತೆ ಹೆಚ್ಚು. ಆದರೆ ಮಧುಮೇಹವನ್ನು ಸಂಪೂರ್ಣ ಹತೋಟಿಗೆ ತಂದರೆ ಈ ಸಮಸ್ಯೆ ಸಂಪೂರ್ಣವಾಗಿ ಗುಣವಾಗುತ್ತದೆ. ■

## ಕಣ್ಣುಗಳಿಗೆ ಬರುವ ಸಾಮಾನ್ಯ ಸಮಸ್ಯೆ

ಕಣ್ಣುಗಳು ತುಂಬ ಸೂಕ್ಷ್ಮವಾಗಿರುವ ಅಂಗ. ಇವುಗಳಿಗೆ ಬರುವ ಸಾಮಾನ್ಯ ಸಮಸ್ಯೆಗಳೆಂದರೆ ನೇರಳೆ ಕಣ್ಣು, ಕಣ್ಣುಗಳ ಉರಿಯೂತ, ಕಣ್ಣರೆಪ್ಪೆ ಮೇಲೆ ಗುಳ್ಳೆಯಾಗುವುದು. ಅಲರ್ಜಿ, ಕೀಟಗಳ ಕಡಿತ, ಕಣ್ಣಿಗೆ ಸುಣ್ಣ ಅಥವಾ ರಾಸಾಯನಿಕಗಳು ನಮ್ಮ ಅರಿವಿಲ್ಲದೇ ಬೀಳುವುದು ಇತ್ಯಾದಿ. ಕೆಲವೊಮ್ಮೆ ಕಣ್ಣುಗಳಿಗೆ ಬಳಸುವ ಕಾಂಟ್ಯಾಕ್ಟ್ ಲೆನ್ಸ್‌ನಿಂದಲೂ ಸಮಸ್ಯೆ ಕಾಣಿಸಿಕೊಳ್ಳಬಹುದು.

ಅಲರ್ಜಿ ಸಾಮಾನ್ಯವಾಗಿ ಎಲ್ಲರಿಗೂ ಬರುತ್ತದೆ. ನಮ್ಮ ಸುತ್ತಮುತ್ತಲ ವಾತಾವರಣದ ಕೊಳಕು, ದೂಳು, ಹೊಗೆ ಇತ್ಯಾದಿ ಅಂಶಗಳು ಕಣ್ಣಿನ ಗುಡ್ಡೆಗಳನ್ನು ಕೆಂಪಾಗುವಂತೆ ಮಾಡಬಹುದು. ಇದರಿಂದ ತುರಿಕೆ ಉಂಟಾಗಿ ಕಣ್ಣಿನ ತುಂಬಾ ನೀರು ತುಂಬಿಕೊಂಡು ಅಲರ್ಜಿಯಾಗುವ ಸಾಧ್ಯತೆ ಇದೆ. ಇಂತಹ ಸಮಯದಲ್ಲಿ ತಕ್ಷಣ ತಜ್ಞ ವೈದ್ಯರನ್ನು ಕಾಣಬೇಕು.